**ಸಿಸಿ ನಂಃ 1427/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 09-03-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಎಸ್ ಎ ಕೆ ರವರಿಂದಃ**

ನೀವು ಶ್ರೀರಾಮ ಕೋ -ಅಪರೇಟಿವ್ ಸೊಸೈಟಿಯನ್ನು ನಡೆಸುತ್ತೀರಿ ಎಂದರೆ ಸುಳ್ಳು. ನೀವು ಸ್ತ್ರೀ ಸಂಘದ ನಿರ್ದೇಶಕರು ಎಂದರೆ ಸರಿ. ನಿಮ್ಮ ಸೊಸೈಟಿಯಿಂದ ಆರೋಪಿಗೆ ಸಾಲ ಕೊಟ್ಟಿದ್ದೀರಿ ಎಂದರೆ ಸುಳ್ಳು. ನಿಮ್ಮ ಫಿರ್ಯಾದಿಯಲ್ಲಿ ಆರೋಪಿ ಶ್ರೀ ಸಮಿತ್ ಭಾಸ್ಕರ್ ನೇತಾಳಕರ್ ಎಂಬವರಿಂದ ಪರಿಚಿತರಾಗಿ ಆರೋಪಿಗೆ ಸಾಲ ಕೊಟ್ಟಿದ್ದೀರಿ ಅಂತಾ ನಮೂದಿಸಲಾಗಿದೆ ಎಂದರೆ ಸರಿ. ನಿಮಗೂ ಶ್ರೀ ಸಮಿತ್ ಭಾಸ್ಕರ್ ನೇತಾಳಕರವರಿಗೂ ಏನು ಸಂಬಂಧ ಎಂದರೆ ಸಾಕ್ಷಿ ವ್ಯವಹಾರಿಕ ಸಂಬಂಧ ಇದೆ ಅಂತಾ ಉತ್ತರಿಸುತ್ತಾರೆ.

2. ನೀವು ಹಣವನ್ನು ಆರೋಪಿಗೆ ಹೇಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಚೆಕ್ಕು ಮೂಲಕ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ.

3. ನಿಮ್ಮ ಶ್ರೀರಾಮ ಕೋ -ಅಪರೇಟಿವ್ ಸೊಸೈಟಿಯಿಂದ 2024 ನೇ ಇಸವಿಯಲ್ಲಿ ಯಾರಿಗೆಲ್ಲಾ ಸಾಲ ಕೊಡಲಾಗಿದೆ ಎಂಬ ಪಟ್ಟಿಯನ್ನು ಹಾಜರುಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಅಂತಾ ಉತ್ತರಿಸುತ್ತಾರೆ.

4. ನೀವು ಆರೋಪಿಗೆ ಯಾವುದೇ ಹಣವನ್ನು ಚೆಕ್ ಮೂಲಕ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಮ್ಮ ಶಿವಂ ಕೋ ಅಪರೇಟಿವ್ ಸೊಸೈಟಿಯಲ್ಲಿ ಆರೋಪಿ ಸಾಲ ಪಡೆದುಕೊಂಡಿದ್ದು ನೀವು ನಿಮ್ಮ ಹೆಸರಿಗೆ ಚೆಕ್ಕನ್ನು ಬರೆದುಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸುಳ್ಳು.

5. ಆರೋಪಿ ನಿಮಗೆ ರೂ.90,000/-ಕಾನೂನು ಸಮ್ಮತವಾಗಿ ವಸೂಲಿ ಮಾಡತಕ್ಕ ಹಣವನ್ನು ಕೊಡುವುದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ವೈಯಕ್ತಿಕವಾಗಿ ನಿಮ್ಮ ಬಳಿ ಯಾವುದೇ

ಸಿಸಿ ನಂಃ 1427/2025

ಪಿ. ಡಬ್ಲ್ಯು 1

ಸಾಲವನ್ನು ಪಡೆದುಕೊಂಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ನೀವು ಚೆಕ್ ಅಮಾನ್ಯಗೊಳಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**